ಪೆರಿನಾಝುಳ ಮನೋಧರ್ಮವನ್ನು ಆತ ಸರಿಯಾಗಿ ಅರ್ಥಮಾಡಿಕೊಂಡಿದ್ದ. ಗ್ರಂಥಾಲಯದ ನಡುವಿದ್ದ ಉರುಟು ಮೇಜಿನ ಸುತ್ತ ಕುಳಿತು ಆತನೊಂದಿಗೆ ದೀರ್ಘ ಮಾತುಕತೆ ನಡೆಯಿತು. ವಿಷಯಕ್ಕೆ ಸೀಮಿತವಾಗಿದ್ದ ಅವನ ಮಾತುಗಳಿಂದ ನಾವು ಮಾಡಬೇಕಾಗಿದ್ದ ವಿನ್ಯಾಸಗಳ ಸ್ಪಷ್ಟ ಮಾಹಿತಿ ದೊರಕಿತು. ಬೌದ್ಧಿಕ ಆಸ್ತಿಯೆಂದರೆ ಪೆರಿನಾಝುಳಿಗೆ ಯಾವಾಗಲೂ ಗೌರವ. ಹಾಗಾಗಿ ನಮ್ಮ ವಿನ್ಯಾಸಗಳ ಬೆಲೆಯಲ್ಲಿ ಯಾವ ಮಾತುಕತೆಯಾಗಲೀ, ಚರ್ಚೆಯಾಗಲೀ ಇಲ್ಲವೆಂಬುದನ್ನು ಮೊದಲೇ ಸ್ಪಷ್ಟೀಕರಿಸಿದ. ಕೇವಲ ಗಾತ್ರದ ದೃಷ್ಟಿಯಿಂದ ಬಟ್ಟೆಯ ಪ್ರಮಾಣದ ಖರ್ಚನ್ನು ಮಾತ್ರ ಗಮನದಲ್ಲಿಟ್ಟುಕೊಳ್ಳುವಂತೆ ಹೇಳಿದ. ಇದು ನಮಗೆ ಯೋಚಿಸಿಲಸದಳವಾದ ಸಮಾಧಾನವನ್ನು ಕೊಟ್ಟಿತು. ನ್ಯೂಯಾರ್ಕ್, ಪ್ಯಾರೀಸ್ ನಗರಗಳಲ್ಲಿ ತರಬೇತಾಗಿ ಬಂದಿದ್ದರೂ, ಉದ್ಯಮದಲ್ಲಿಳಿದು ಕೆಲಸ ಮಾಡಿದ ಅನುಭವ ಇದೇ ಮೊದಲಾದುದರಿಂದ, ನಾನು ತುಸು ಅಂಜಿಕೊಂಡೇ ಇದ್ದೆ. ಬೆಲೆಯ ಇಳಿಕೆಯ ಬಗ್ಗೆ ಛಾಯಾ ನನ್ನನ್ನು ತಯಾರು ಮಾಡಿದ್ದು ಸ್ವಲ್ಪವೇನಲ್ಲ. ವೆರಾನಿ ಮತ್ತು ನೀಲಿಮಾರೂ ಫೋನಿನಲ್ಲೂ, ಇಮೇಲ್‌ಗಳಲ್ಲೂ ಸಾಕಷ್ಟು ತಿಳಿಸಿ ಹೇಳಿದ್ದರು. ಆದರೆ, ವ್ಯವಹಾರ ಎನ್ನುವುದನ್ನು ಇಷ್ಟೊಂದು ಸುಲಭದಲ್ಲಿ ನಿಭಾಯಿಸಬಹುದೆಂಬುದು ನನ್ನ ನಿರೀಕ್ಷೆಗೆ ಮೀರಿದ್ದಾಗಿತ್ತು.

ಮಾತು ಮುಗಿದು ಬೀಳ್ಕೊಡುವಾಗ, 'ಒಂದು ಕೋರಿಕೆ' ಎಂದು ದಾಸ್‌ಗುಪ್ತ ಪ್ರಸ್ತಾಪಿಸಿದ. 'ಯಾವುದೇ ರೀತಿಯ ಪ್ರಚಾರ - ಮಾಧ್ಯಮಕ್ಕಾಗಲೀ, ಬೇರೆ ಯಾರಿಗೇ ಆಗಲಿ - ಬೇಡ. ಇದು ನಮ್ಮನಮ್ಮೊಳಗಿನ ವ್ಯವಹಾರ.' ಎಂದು ಕಟ್ಟುನಿಟ್ಟಾಗಿ ಹೇಳಿ ಮುಗಿಸಿದ. ಅಷ್ಟೇ ಅಲ್ಲ ಗೌಪ್ಯತೆಯ ಷರತ್ತಿಗೆ ನಮ್ಮ ಸಹಿಯನ್ನೂ ಹಾಕಿಸಿಕೊಂಡ. ಮತ್ತೆ ಎರಡೂ ಕೈ ಮುಂದೆ ಮಾಡಿ, 'ಬಾಯಿ ಮಾತಿನ ಒಪ್ಪಂದದ ಹಣ' ಎಂದು ಐವತ್ತು ಸಾವಿರದ ಚೆಕ್ಕನ್ನು ಕೈಯ್ಯಲ್ಲಿರಿಸಿದ. ಬರುವ ವಾರದಲ್ಲಿ ವೆರಾನಿಯವರು ಬಂದ ಮೇಲೆ ನಿಯಮಿತ ಒಪ್ಪಂದದೊಂದಿಗೆ ಮುಂಗಡ ಹಣ ಕೊಡುವ ಬಗ್ಗೆಯೂ ಹೇಳಿದ.

ಹೊರಗೆ ಬರುತ್ತ ವೆರಾನಿಗೂ, ನೀಲಿಮಾಳಿಗೂ ಸಂದೇಶ ಕಳಿಸಿದೆ.

ವಾಪಸ್ಸು ಬರುವ ದಾರಿಯಲ್ಲಿ ನಾನಾಗಲೀ, ಪ್ರಣೀತಳೇ ಆಗಲೀ ಏನೂ ಮಾತಾಡಲಿಲ್ಲ. ಇಷ್ಟೊಂದು ದೊಡ್ಡ ಮೊತ್ತದ ವಹಿವಾಟನ್ನು ಒಂದೇ ಭೇಟಿಯಲ್ಲಿ ಪೂರೈಸಿದ ಹಿಗ್ಗು ಒಂದು ಕಡೆಯಾದರೆ, ಇಡೀ ಪ್ರಸಂಗದ ಭಾವುಕತೆ ಇನ್ನೊಂದು ಕಡೆ. ಪ್ರಣೀತಳೂ ಗರಬಡಿದವಳಂತೆ ಕುಳಿತಿದ್ದವಳು, ಪೆಡ್ಡಾರೋಡಿನಿಂದ ಕೆಳಗಿಳಿಯುತ್ತಲೂ ಒಂದು ಕ್ಷಣ ಬದಿಯಲ್ಲಿ ಕಾರು ನಿಲ್ಲಿಸುವಂತೆ ಕೇಳಿದಳು. ಸಮುದ್ರದ ದಂಡೆಗೆ ತಾಗಿ ಕಾರು ನಿಲ್ಲಿಸಿದ್ದೇ ಅವಳು ಗಟ್ಟಿದನಿ ಎತ್ತಿ ಅಭಿನಂದಿಸುತ್ತ ನನ್ನ ಎರಡೂ ಕೈಗಳನ್ನು ಹಿಡಿದು ಕುಲುಕಿದಳು. ನಾವು ಒಬ್ಬರನ್ನೊಬ್ಬರು ಅಭಿನಂದಿಸಿಕೊಂಡೆವು. ಕಷ್ಟಪಟ್ಟು ನನ್ನ ಭಾವನೆಗಳನ್ನು ತಡೆಹಿಡಿಯಬೇಕಾಯಿತು. ಸಹಾಯಕಿಯೆದುರು ಅವನ್ನು ತೋರ್ಪಡಿಸುವುದು ನನಗೆ ಬೇಕಿರಲಿಲ್ಲ. 'ದಾಸ್‌ಗುಪ್ತ ಹೇಳಿದ್ದು ನೆನಪಿರಲಿ,' ಎಂದೆ. ಆಗಲಿ ಎಂದು ಅವಳು ತಲೆಯಾಡಿಸಿದಳು.

ಅಲ್ಲಿಂದ ಹೊರಟು ಅವಳನ್ನು ದಾದರ್ ನಿಲ್ದಾಣದಲ್ಲಿ ಬಿಟ್ಟು ಮಾಹಿಮಿನತ್ತ ಕಾರು ತಿರುಗಿಸಿದೆ. ವೃತ್ತಿ ಜೀವನದ ಆರಂಭದಲ್ಲೇ ಇಂತಹ ದೊಡ್ಡ ವ್ಯವಹಾರವನ್ನು ಕುದುರಿಸಿದುದು- ಅದೂ ಒಂದೆರಡಲ್ಲ ಲಕ್ಷಗಟ್ಟಲೆ ಬೆಲೆಯ ಸುಮಾರು ಇನ್ನೂರು ಉಡುಪುಗಳೆಂದರೆ - ಅದೇನೂ ಸಾಮಾನ್ಯವಾಗಿರಲಿಲ್ಲ. ಆದರೆ, ನನ್ನ ಮನಸ್ಸು ಎಳೆಯ ಪ್ರಾಯದಲ್ಲಿ ತಂದೆಯ ನಡವಳಿಕೆಯಿಂದಾಗಿ ಅನುಭವಿಸಿದ ಸಾಮಾಜಿಕ ಅಪಮಾನವನ್ನು ತೀರ ಮನಸ್ಸಿಗೆ ಹಚ್ಚಿಕೊಂಡು ಬದುಕನ್ನಿಡೀ ಏಕಾಂತವಾಸದಲ್ಲಿ ಕಳೆದ ಪೆರಿನಾಝುಳ ಬಗ್ಗೆಯೇ ಯೋಚಿಸುತ್ತಿತ್ತು. ಅವಳ ರೀತಿ, ನೀತಿ, ನಡಿಗೆ, ಮಾತು, ಹಣ, ಐಶ್ವರ್ಯಗಳನ್ನು ನೋಡಿದರೆ ಅವಳು ಜಗತ್ತಿನ ಯಾವ ಭಾಗದಲ್ಲೂ ಇರಬಹುದಿತ್ತು. ಐಷಾರಾಮದ ಜೀವನ ಸಾಗಿಸಬಹುದಿತ್ತು. ಅದ್ದೂರಿಯ ಪಾರ್ಟಿಗಳನ್ನು ನಡೆಸಬಹುದಿತ್ತು. ಪೆಡ್ಡಾ ರೋಡ್, ಮಲಬಾರ್ ಹಿಲ್ ಪ್ರದೇಶದಲ್ಲಿ ಪಾರ್ಟಿಗಳಿಗೇನೂ ಕೊರತೆಯಿರಲಿಲ್ಲ. ಆದರೆ, ಅವಳು ಮಾತ್ರ ಮುಚ್ಚಿದ ಬಾಗಿಲ ಹಿಂದಿರುವುದನ್ನೇ ಆಯ್ಕೆ ಮಾಡಿಕೊಂಡು, ಬೊಂಬೆಗಳ ಜಗತ್ತಿನೊಂದಿಗಿದ್ದಳು.

ಮುನ್ನಾದಿನ ಮನೆಯೊಡತಿ ಐರೀನ್ ಡಿ'ಸೋಜಾ ಹೇಳಿದ ಮಾತೇ ನೆನಪಾಗುತ್ತಿತ್ತು. ಏಕಕಾಲದಲ್ಲಿ ಅನೇಕ ಮೊಕದ್ದಮೆಗಳು ನಡೆಯುತ್ತಿದ್ದುದನ್ನು